ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 07॥Udp/1263/2015-17 || R.NO.50495/91 ॥ ತಾರೀಕು : 28–02–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

# ಮಾರ್ಚ್ 4: ನೇರಂಬಳ್ಳಿ ರಾಘವೇಂದ್ರರಾವ್ ರಿಗೆ ಸಮಾಜ ಸೇವಾ ವಿಭೂಷಣ ಪ್ರಶಸ್ತಿ



ಹಿರಿಯ ಹೋಟೆಲ್ ಉದ್ಯಮಿ, ಕರ್ನಾಟಕ ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಸಂಘದ ಮಾಜಿ ಅಧ್ಯಕ್ಷ ನೇರಂಬಳ್ಳಿಯ ಎನ್.ಆರ್.ನಾರಾಯಣ ರಾವ್ – ಲಕ್ಷ್ಮೀದೇವಿ ದಂಪತಿಯ ಹಿರಿಯ ಪುತ್ರ ನೇರಂಬಳ್ಳಿ ರಾಘವೇಂದ್ರ ರಾವ್ ಕರ್ನಾಟಕ ಹಾಗೂ ಆಂಧ್ರ ಪ್ರದೇಶದಲ್ಲಿ ಹೋಟೆಲ್ ಉದ್ಯಮದಲ್ಲಿ ಹೆಸರುವಾಸಿಯಾದ ಯಶಸ್ವಿ ಉದ್ಯಮಿ ಹಾಗೂ ಸಮರ್ಥ ನಾಯಕ.

ಹಲವು ದಶಕಗಳಿಂದ ಹೋಟೆಲ್ ಉದ್ಯಮದಲ್ಲಿ ಬಿಡುವಿಲ್ಲದೆ ಕ್ರಿಯಾಶೀಲ ರಾಗಿ ಉದ್ಯಮದ ವಿಸ್ತರಣೆ, ಅಭಿವೃದ್ಧಿಯಲ್ಲಿ ತೊಡಗುತ್ತಾ ಸಾಮಾಜಿಕ ಕಾರ್ಯಗಳಿಗೂ ಸಮಯವನ್ನು ಮೀಸಲಾಗಿಟ್ಟಿರುವುದು ಇವರ ವ್ಯಕ್ತಿತ್ವದ ವಿಶೇಷ.

ನಗುಮುಖ, ಸ್ವಚ್ಛ ದಿರಸು, ಸ್ನೇಹ ಪರತೆ, ಉತ್ತಮ ಜನಸಂಪರ್ಕ, ಪರೋಪಕಾರ ಮನೋಭಾವದಿಂದ ಯಾರನ್ನೂ ಸೆಳೆಯಬಲ್ಲ ಗುಣವಿಶೇಷ. ನೇರ ನುಡಿಯ ಈ ಉದ್ಯಮಿ ತಾನು ಶಾಲಾ ದಿನಗಳಲ್ಲಿ ಬುದ್ಧಿವಂತ ವಿದ್ಯಾರ್ಥಿಯಲ್ಲ ದಿದ್ದರೂ ಶಿಕ್ಷಕರ ಮಾರ್ಗದರ್ಶನ, ಪ್ರೇರಣೆಯಿಂದ ಹೇಗೆ ಪ್ರಜ್ಞಾವಂತನಾಗಿ ಜೀವನದಲ್ಲಿ ಯಶಸ್ಸು ಪಡೆದೆ ಎಂದು ಆಡುವ ನುಡಿಗಳು ವಿದ್ಯಾರ್ಥಿಗಳಿಗೆ ಅನುಕರಣೀಯ.

ಕೋಣಿಯಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣ, ಕೋಟೇಶ್ವರದಲ್ಲಿ ಪ್ರೌಢಶಿಕ್ಷಣ, ಕುಂದಾಪುರದಲ್ಲಿ ಪ.ಪೂ.ಶಿಕ್ಷಣ ಪಡೆದು ಊರು ಬಿಟ್ಟು ತಂದೆಯ ಮಾರ್ಗದರ್ಶನದಲ್ಲಿ ಹೋಟೆಲ್ ಉದ್ಯಮದಲ್ಲಿ ತನ್ನನ್ನು ತೊಡಗಿಸಿಕೊಂಡ ಯುವಕನ ಯಶಸ್ಸಿನ ನಡೆ ಕರ್ನಾಟಕ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪಡೆಯುವ ತನಕ ಸಾಗಿತು.

ಉಡುಪಿ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಶ್ರೀ ಕಾಣಿಯೂರು ಮಠಾಧೀಶರ ಪರ್ಯಾಯ ಸಮಾರಂಭ ದಲ್ಲಿ ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ, ಸನ್ಮಾನ, ಗೌರವ ಪಡೆದರು.

ಎನ್.ರಾಘವೇಂದ್ರ ರಾಯರಿಗೆ ಸಮಾಜದಿಂದ, ಸರಕಾರದಿಂದ, ಧಾರ್ಮಿಕ ಕ್ಷೇತ್ರಗಳಿಂದ ಸಿಗುವ ಗೌರವದ ಹಿಂದೆ ಅವರು ಸಮಾಜದ ಅಭಿವೃದ್ಧಿಗಾಗಿ ಮಾಡಿದ ಅಪಾರ ಸೇವೆಯ, ಶಕ್ತಿಯ, ಪ್ರಭಾವಳಿ ಇದೆ.

ಹುಟ್ಟೂರ ಬಗ್ಗೆ ಆಸಕ್ತಿ, ಬದುಕಿನಲ್ಲಿ ಸತ್ಕಾರ್ಯಗಳಿಗೆ ತಾನು ಆದಷ್ಟು ಸಹಾಯ ಮಾಡಬೇಕು ಎಂಬ ತುಡಿತ, ಅವರಿಂದ ಸಹಕಾರ ಪಡೆದ ಸಂಘ ಸಂಸ್ಥೆಗಳು, ಪ್ರತಿಭಾವಂತರು, ಅಸಹಾಯಕರು, ಅಭಿಮಾನಿಗಳ ಆಶಯ, ಹಾರೈಕೆ ಇಂದು ರಾಘವೇಂದ್ರ ರಾವ್ ಅವರನ್ನು ಶ್ರೇಷ್ಠರ ಸಾಲಲ್ಲಿ ನಿಲ್ಲಿಸಿದೆ.

ಈ ಕಾರಣಕ್ಕಾಗಿಯೇ ಕೋಟೇಶ್ವರ ಮಾಗಣೆ ಗ್ರಾಮಗಳೂ ಸೇರಿ ಕುಂದಾಪುರ ತಾಲ್ಲೂಕಿನ ಅವರ ಹಿತೈಷಿಗಳು ಅವರನ್ನು ಸಾರ್ವಜನಿಕವಾಗಿ ಗುರುತಿಸಿ, "ಸಮಾಜ ಸೇವಾ ವಿಭೂಷಣ" ಪ್ರಶಸ್ತಿ ನೀಡಲು

(6ನೇ ಪುಟಕ್ಕೆ)

## ಮಾರ್ಚ್ 2: ಬಸ್ರೂರು ಶ್ರೀ ಲಕ್ಷ್ಮೀ ದಾಮೋದರ ಸಭಾಭವನ ಉದ್ಘಾಟನೆಗೆ ಶ್ರೀ ಗೋಕರ್ಣ ಮಠಾಧೀಶರು





ಬಸ್ರೂರಿನ ಇತಿಹಾಸ ಪ್ರಸಿದ್ಧ ಶ್ರೀ ಲಕ್ಷ್ಮೀ ದಾಮೋದರ ದೇವಸ್ಥಾನದ ನೂತನ ಸಭಾಭವನವನ್ನು ಉದ್ಘಾಟಿಸಲು ಮಾರ್ಚ್ 2 ರಂದು ಶ್ರೀ ಗೋಕರ್ಣ ಮಠಾಧೀಶರು ಬಸ್ರೂರಿಗೆ ಚಿತ್ತೈಸಲಿದ್ದಾರೆ.

ಹಿರಿಯ ಉದ್ಯಮಿ ಅರಾಟೆ ಸರ್ವೋತ್ತಮ ಪೈ ಕುಂದಾಪುರ ಇವರು ಪ್ರಧಾನ ಸೇವಾದಾರರಾಗಿ ಸೇವಾರೂಪದಲ್ಲಿ ನಿರ್ಮಿಸಿರುವ ಶ್ರೀ ಲಕ್ಷ್ಮೀ ದಾಮೋದರ ಸಭಾಭವನ ಉದ್ಘಾಟನೆಯನ್ನು 02.03.2017 ರಂದು ಗುರುವಾರ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಪರಮ ಪೂಜ್ಯ ಶ್ರೀಮದ್ ವಿದ್ಯಾಧಿರಾಜ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ತಮ್ಮ ಪಟ್ಟ ಶಿಷ್ಯ ಶ್ರೀಮದ್ ವಿದ್ಯಾಧೀಶ ಶ್ರೀಪಾದ ವಡೇರ ಸ್ವಾಮೀಜಿಯವರೊಂದಿಗೆ ನೆರವೇರಿಸಲಿದ್ದಾರೆ.

ಮಾರ್ಚ್ 1 ರಿಂದ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿದೆ. ದಿನಾಂಕ 2 ರಂದು ಮಧ್ಯಾಹ್ನ 2.30 ಕ್ಕೆ ಸ್ವಾಮೀಜಿಯವರು ಆಗಮಿಸಲಿದ್ದು 3.50ಕ್ಕೆ ಸಭಾಭವನ ಉದ್ಘಾಟನೆ ನಡೆಯಲಿದೆ. ಈ ಕಾರ್ಯಕ್ರಮಗಳಲ್ಲಿ ಕುಳಾವಿ ಬಂಧುಗಳು, ಸಮಾಜ ಬಾಂಧವರು ಪಾಲ್ಗೊಂಡು ಶ್ರೀ ಹರಿಗುರು ಕೃಪೆಗೆ ಪಾತ್ರರಾಗಬೇಕೆಂದು ಆಡಳಿತ ಮಂಡಳಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಂಡಾರ್‌ಕಾರ್ಸ್ : ನವೀಕೃತ ಕುಂಭಾಶಿ ರಾಧಾಬಾಯಿ ವೆಂಕಟರಮಣ ಪ್ರಭು ರಂಗಮಂದಿರ ಉದ್ಘಾಟನೆ



ಭಂಡಾರ್‌ಕಾರ್ಸ್ ಕಾಲೇಜಿನ ನವೀಕೃತ ಕುಂಭಾಶಿ ರಾಧಾಭಾಯಿ ವೆಂಕಟರಮಣ ಪ್ರಭು ರಂಗಮಂದಿರವನ್ನು ಡಾ.ಎಚ್.ಶಾಂತಾರಾಮ್ ಉದ್ಘಾಟಿಸುತ್ತಿರುವುದು.

(5 ನೇ ಪುಟಕ್ಕೆ)

ರಂಗ ಪ್ರವೇಶ–ಶುಭ ಹಾರೈಕೆ



ಡಾ। ಮಾಲವಿಕ ಹೆಬ್ಬಾರ್

ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಆರ್.ಎನ್.ಶೆಟ್ಟಿ ಸಭಾಂಗಣದಲ್ಲಿ ಮಾರ್ಚ್ 5 ರಂದು ಸಂಜೆ 5 ಗಂಟೆಗೆ ರಂಗ ಪ್ರವೇಶ ಮಾಡಲಿರುವ ಕುಂದಾಪುರದ ಡಾ. ಪುಷ್ಪಗಂಧಿನಿ ಮತ್ತು ಡಾ.ಎಚ್.ಆರ್.ಹೆಬ್ಬಾರ್ ಅವರ ಪುತ್ರಿ ಡಾ.ಮಾಲವಿಕ ಹೆಬ್ಬಾರ್‌ಗೆ ಶುಭಕೋರುವ

ಹಿತೈಷಿಗಳು